ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಕಛೇರಿ,
ನವನಗರ, ಪಿ.ಬಿ.ರೋಡ, ಹುಬ್ಬಳ್ಳಿ - 580 025.
Tel: +91836 2324196

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Company Office,
Navanagar, P.B.Road, Hubballi - 580025
E-mail Id: eehrd.hescom@gmail.com

Corporate Identity Number (CIN): U31401KA2002SGC030437

ಕ್ರ.ಸಂ: ಹೆಸ್ಕಾಂ/ಪ್ರ.ವ್ಯ(ಆ&ಮಾ.ಸಂ.ಅ)/ಇಇ(ಮಾ.ಸಂ.ಅ&ಕೈ.ತ.ಕೇಂ)/22-23/ C45-899 ದಿ: 12 MAY 2022

# ಪ್ರಕಟಣೆ

ವಿಷಯ: 2022-23 ನೇ ಸಾಲಿನಲ್ಲಿ ಐಟಿಐ ಇಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ 238 ಶಿಶುಕ್ಷುಗಳನ್ನು ಆಯ್ಕೆ ಮಾಡುಲು ಅರ್ಜಿ ಸ್ವೀಕರಿಸುವ ಅಂತಿಮ ದಿನಾಂಕವನ್ನು ವಿಸ್ತರಿಸಲಾಗಿದೆ.

*********

2022-23 ನೇ ವರ್ಷದ ಅವಧಿಗಾಗಿ ಐಟಿಐ ಇಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ 238 ಶಿಶುಕ್ಷುಗಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಕರೆಯಲಾಗಿದ್ದು, ಅರ್ಹ ಅಭ್ಯರ್ಥಿಗಳಿಗೆ ಬೇಕಾಗುವ ಅರ್ಹತೆಗಳ ವಿವರ ಹಾಗೂ ಶಿಶುಕ್ಷುಗಳು ಸಲ್ಲಿಸಬೇಕಾಗುವ ಅರ್ಜಿಯ ನಮೂನೆ ಹಾಗೂ ಸಂಬಂಧಿತ ಲಗತ್ತುಗಳು ಹೆಸ್ಕಾಂನ ವೆಬ್ ಸೈಟ್ : **www.hescom.karnataka.gov.in** ನಲ್ಲಿ ಲಭ್ಯವಿರುತ್ತವೆ. ಭರ್ತಿ ಮಾಡಿದ ಅರ್ಜಿಗಳನ್ನು, ಲಗತ್ತುಗಳೊಂದಿಗೆ ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಕೈಗಾರಿಕಾ ತರಬೇತಿ ಕೇಂದ್ರ (ಐ.ಟಿ.ಸಿ), ಹೆಸ್ಕಾಂ, ವಿದ್ಯುತ್ ನಗರ, ಕಾರವಾರ ರಸ್ತೆ, ಹುಬ್ಬಳ್ಳಿ–24, ಇವರಿಗೆ ದಿನಾಂಕ **20-05-2022** ರ ಸಂಜೆ **4.00** ಘಂಟೆಯ ಒಳಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸಬಹುದಾಗಿದೆ. ಮುಂದಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ವಿ), ಕೈಗಾರಿಕಾ ತರಬೇತಿ ಕೇಂದ್ರ ಇವರನ್ನು ಸಂಪರ್ಕಿಸಿರಿ (0836-2956611).

ಸಹಿ/-

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ)
ನಿಗಮ ಕಛೇರಿ, ನವನಗರ, ಹುಬ್ಬಳ್ಳಿ 12/05/22

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಕಛೇರಿ,
ನವನಗರ, ಪಿ.ಬಿ.ರೋಡ, ಹುಬ್ಬಳ್ಳಿ - 580 025.
Tel: +91836 2324196

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Company Office,
Navanagar, P.B.Road, Hubballi - 580025
E-mail Id: eehrd.hescom@gmail.com

Corporate Identity Number (CIN): U31401KA2002SGC030437

ಕ್ರ.ಸಂ:ಹೆಸ್ಕಾಂ/ಪ್ರ.ವ್ಯ(ಆ&ಮಾ.ಸಂ.ಅ)/ಇಇ(ಮಾ.ಸಂ.ಅ&ಕೈ.ತ.ಕೇಂ)/22-23/ 245-910 ದಿ: 12 MAY 2022

# 2022-23 ನೇ ಸಾಲಿನಲ್ಲಿ ಐಟಿಐ ಎಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ ಅರ್ಜಿ ಕರೆಯಲಾದ ಅಭ್ಯರ್ಥಿಗಳ ಅರ್ಹತೆಗಳ ವಿವರ ಹಾಗೂ ಅರ್ಜಿ ನಮೂನೆ

ವಿಷಯ: 2022-23 ನೇ ಸಾಲಿನಲ್ಲಿ ಐಟಿಐ ಇಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ 238 ಜನ ಶಿಶುಕ್ಷುಗಳ ಆಯ್ಕೆ ಕುರಿತು.

*********

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿಯ ವಿದ್ಯುತ್ ನಗರದಲ್ಲಿರುವ ಕೈಗಾರಿಕಾ ತರಬೇತಿ ಕೇಂದ್ರದಿಂದ 2022-23 ನೇ ಸಾಲಿನ ಐಟಿಐ ಇಲೆಕ್ಟ್ರೀಶಿಯನ್ ವೃತ್ತಿಯಲ್ಲಿ ಶಿಶುಕ್ಷು ತರಬೇತಿ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.

1. ಎನ್.ಸಿ.ವಿ.ಟಿ/ಎಸ್.ಸಿ.ವಿ.ಟಿ (NCVT/SCVT) ಶೈಕ್ಷಣಿಕ ಸಂಸ್ಥೆಗಳಿಂದ ಎರಡು ವರ್ಷದ ಐ.ಟಿ.ಐ (ಇಲೆಕ್ಟ್ರೀಶಿಯನ್) ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳಿಗೆ ಒಂದು ವರ್ಷದ ಶಿಶುಕ್ಷು ತರಬೇತಿಯನ್ನು ನೀಡಲಾಗುವುದು.
2. ಅಭ್ಯರ್ಥಿಯ ವಯಸ್ಸು 20.05.2022 ಕ್ಕೆ 25 ವರ್ಷಕ್ಕಿಂತ ಮೀರಿರಬಾರದು. ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳ ವಯಸ್ಸು 20.05.2022 ಕ್ಕೆ 30 ವರ್ಷಕ್ಕಿಂತ ಮೀರಿರಬಾರದು.
3. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ತೆಗೆದುಕೊಂಡಿದ್ದು ಮತ್ತು ಕನ್ನಡದಲ್ಲಿ ಓದಲು ಹಾಗೂ ಬರೆಯಲು ತಿಳಿದಿರಬೇಕು.
4. ಇಲೆಕ್ಟ್ರೀಶಿಯನ್ ವೃತ್ತಿಯಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

5. ಅಭ್ಯರ್ಥಿಗಳು ಹೆಸ್ಕಾಂಗೆ ಅರ್ಜಿ ಸಲ್ಲಿಸುವ ಮುನ್ನ ಅಪ್ರೆಂಟಿಸ್‌ಶೀಪ್ ಪೋರ್ಟಲ್ www.apprenticeshipindia.gov.in ನಲ್ಲಿ ಈ ಪ್ರಕಟಣೆಯೊಂದಿಗೆ ಲಗತ್ತಿಸಲಾದ ಅನುಬಂಧದಲ್ಲಿ ಸೂಚಿಸಿರುವ ಮಾರ್ಗಸೂಚಿಗಳ ಪ್ರಕಾರ ನೊಂದಾಯಿಸಬೇಕು. ನಂತರ **Hubli Electricity Supply Company Ltd.** ನ್ನು ಆಯ್ಕೆ ಮಾಡಬೇಕು.

6. ಅಪ್ರೆಂಟಿಸ್‌ಶೀಪ್ ಪೋರ್ಟಲಿನಲ್ಲಿ ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯ ಪ್ರಕಾರ (ಹೆಸರು, ಹುಟ್ಟಿದ ದಿನಾಂಕ, ಇತ್ಯಾದಿ) ನೊಂದಾಯಿಸಿಕೊಳ್ಳಬೇಕು ಹಾಗೂ ಆಧಾರ ಕಾರ್ಡ ಕೂಡ ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯ ಪ್ರಕಾರ ಇದ್ದಾಗ ಮಾತ್ರ ನೊಂದಣಿಯು ಪೂರ್ಣಗೊಳ್ಳುತ್ತದೆ.

7. ಮೇಲೆ ತಿಳಿಸಿರುವ ಅಪ್ರೆಂಟಿಸ್‌ಶೀಪ್ ಪೋರ್ಟಲಿನಲ್ಲಿ ನೊಂದಾಯಿಸಿಕೊಳ್ಳಲು ಸಹಾಯಕ್ಕಾಗಿ ಅಭ್ಯರ್ಥಿಗಳು ಈ ಕೆಳಗೆ ತಿಳಿಸಿರುವ ಕಛೇರಿಗೆ ಭೇಟಿ ನೀಡಬಹುದು ಅಥವಾ ದೂರವಾಣಿ ಮೂಲಕ ಸಂಪರ್ಕಿಸಬಹುದು.

**ಜಂಟಿ ನಿರ್ದೇಶಕರು (ತರಬೇತಿ),**
**ಮತ್ತು ಜಂಟಿ ಅಪ್ರೆಂಟಿಸ್‌ಶೀಪ್ ಸಲಹೆಗಾರರು,**
**ಬೆಳಗಾವಿ ವಿಭಾಗೀಯ ಕಛೇರಿ,**
**ನವನಗರ, ಹುಬ್ಬಳ್ಳಿ-580025.**
**ದೂರವಾಣಿ ಸಂಖ್ಯೆ: 0836-2225342**

8. ಅಪ್ರೆಂಟಿಸ್‌ಶೀಪ್ ಪೋರ್ಟಲಿನಲ್ಲಿ ನೊಂದಾಯಿಸಿ, **Hubli Electricity Supply Company Ltd.** ನ್ನು ಆಯ್ಕೆ ಮಾಡದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

9. ತರಬೇತಿ ಅವಧಿಯಲ್ಲಿ ಶಿಶುಕ್ಷು ವೇತನವನ್ನು ಪ್ರತಿ ತಿಂಗಳಿಗೆ **ರೂ. 7,000**/- ಕ್ಕೆ ನಿಗದಿಪಡಿಸಲಾಗಿದೆ

10. ಪೂರ್ಣ ವಿವರವಿರುವ (ಬಯೋಡಾಟಾ) ಎ-4 ಸೈಜಿನ ಹಾಳೆಯಲ್ಲಿ ಸ್ವಯಂ ಲಿಖಿತ ಅಥವಾ ಬೆರಳಚ್ಚು ಮಾಡಿದ ಅರ್ಜಿಗಳನ್ನು ಸಾಮಾನ್ಯ ಅಭ್ಯರ್ಥಿಗಳು ರೂ. 100/- ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ರೂ. 50/- ಬೆಲೆಯ ಮೊತ್ತದ ಇಂಡಿಯನ್ ಪೋಸ್ಟಲ್ ಆರ್ಡರನ್ನು "ಆರ್ಥಿಕ ಸಲಹೆಗಾರರು, ಹುವಿಸಕಂನಿ, ಹುಬ್ಬಳ್ಳಿ" ಇವರ ಹೆಸರಿನಲ್ಲಿ ಖರೀದಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು ಹಾಗೂ ಲಕೋಟೆಯ ಮೇಲೆ **"ಇಲೆಕ್ಟ್ರೀಶಿಯನ್ ವೃತ್ತಿಯ ಶಿಶುಕ್ಷು ತರಬೇತಿಗಾಗಿ ಅರ್ಜಿ"** ಎಂದು ನಮೂದಿಸಬೇಕು.

11. ಅರ್ಜಿಯೊಂದಿಗೆ ಈ ಕೆಳಗಿನ ದಾಖಲಾತಿಗಳನ್ನು ಲಗತ್ತಿಸಬೇಕು.

ಅ) ಧೃಡೀಕರಿಸಲ್ಪಟ್ಟ ಜಾತಿ ಪ್ರಮಾಣ ಪತ್ರದ ಛಾಯಾ ಪ್ರತಿ (ಝರಾಕ್ಸ).

ಆ) ಧೃಡೀಕರಿಸಲ್ಪಟ್ಟ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ಛಾಯಾ ಪ್ರತಿ (ಝರಾಕ್ಸ).

ಇ) ಧೃಡೀಕರಿಸಲ್ಪಟ್ಟ ಇಲೆಕ್ಟ್ರೀಶಿಯನ್ ವೃತ್ತಿಯಲ್ಲಿ ಎರಡು ವರ್ಷದ ಕೋರ್ಸಿನ ಐ.ಟಿ.ಐ ಅಂಕಪಟ್ಟಿಯ ಛಾಯಾ ಪ್ರತಿ (ಝರಾಕ್ಸ).

ಈ) ಆರು ತಿಂಗಳೊಳಗೆ ಧೃಡೀಕರಿಸಲ್ಪಟ್ಟ ಸರಕಾರಿ ಆಸ್ಪತ್ರೆಯ ವೈದ್ಯರಿಂದ ದೈಹಿಕ ಸಾಮರ್ಥ್ಯ ಪ್ರಮಾಣ ಪತ್ರದ ಛಾಯಾ ಪ್ರತಿ (ಝೆರಾಕ್ಸ).

ಉ) ಇತ್ತೀಚಿಗಿನ ಪಾಸಪೋರ್ಟ ಸೈಜಿನ ಒಂದು ಭಾವ ಚಿತ್ರವನ್ನು ಅರ್ಜಿಗೆ ಲಗತ್ತಿಸಬೇಕು.

12. ಮೇಲೆ ತಿಳಿಸಿರುವ ದಾಖಲಾತಿಗಳಲ್ಲಿ ಯಾವುದಾದರೂ ಒಂದು ದಾಖಲಾತಿಯನ್ನು ಸಲ್ಲಿಸದಿದ್ದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ

13. ಧೃಡೀಕರಿಸದೇ ಇರುವ ಪ್ರಮಾಣ ಪತ್ರಗಳನ್ನೊಳಗೊಂಡ ಹಾಗೂ ಪೂರ್ಣ ವಿವರವಿಲ್ಲದ ಅರ್ಜಿಗಳನ್ನು ನೇರವಾಗಿ ತಿರಸ್ಕರಿಸಲಾಗುವುದು.

14. ಅಭ್ಯರ್ಥಿಗಳು ಸ್ವ ವಿಳಾಸ ವಿರುವ 4"X9" ಅಳತೆಯ 1 ಲಕೋಟೆಯನ್ನು ಅರ್ಜಿಯ ಜೊತೆಗೆ ಕಳುಹಿಸಬೇಕು.

15. ಜಂಟಿ ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆಯವರು ಸೂಚಿಸಿದಂತೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ವಿವಿಧ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ನಿಯಮಾನುಸಾರ ಸ್ಥಾನಗಳನ್ನು ಕಾಯ್ದಿರಿಸಲಾಗುವುದು.

16. ಭರ್ತಿ ಮಾಡಿದ ಅರ್ಜಿಗಳನ್ನು ಕಾರ್ಯನಿರ್ವಾಹಕ ಅಭಿಯಂತರರು(ವಿ), ಕೈಗಾರಿಕಾ ತರಬೇತಿ ಕೇಂದ್ರ, (ಆಯ್.ಟಿ.ಸಿ), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ವಿದ್ಯುತ್‌ನಗರ, ಕಾರವಾರ ರಸ್ತೆ, ಹುಬ್ಬಳ್ಳಿ-580024 ರವರ ಕಛೇರಿಗೆ **20.05.2022** ರ ಸಂಜೆ **4** ಘಂಟೆಯೊಳಗಾಗಿ ಖುದ್ದಾಗಿ ಅಥವಾ ಅಂಚೆಯ ಮೂಲಕ ಕಳುಹಿಸಬೇಕು.

17. ಯಾವುದೇ ಕಾರಣಕ್ಕೂ ಪೋಸ್ಟಲ್ ಆರ್ಡರ್‌ಗಳನ್ನು ವಾಪಸ್ ಮಾಡಲಾಗುವುದಿಲ್ಲ ಮತ್ತು ಶಿಫಾರಸ್ಸು ತರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಯಾವುದೇ ರೀತಿಯ ಪತ್ರ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ.

18. ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳು ಶಿಶಿಕ್ಷು ವೇತನವನ್ನು ಸ್ವೀಕರಿಸಲು ಎಸ್.ಬಿ.ಐ (SBI) ಖಾತೆಯನ್ನು ಹೊಂದಿರಬೇಕು.

19. ಈ ಹಿಂದಿನ ಪತ್ರಿಕಾ ಪ್ರಕಟಣೆ ದಿನಾಂಕ: 02.04.2022 ಇದರ ಅವಧಿಯನ್ನು ದಿನಾಂಕ: 20.05.2022 ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ.

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ)
ನಿಗಮ ಕಛೇರಿ, ನವನಗರ, ಹುಬ್ಬಳ್ಳಿ

# ಅರ್ಜಿ ನಮೂನೆ

## ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## ಕೈಗಾರಿಕಾ ತರಬೇತಿ ಕೇಂದ್ರ ಹುಬ್ಬಳ್ಳಿಯಲ್ಲಿಯ ಶಿಶುಕ್ಷು ತರಬೇತಿಗಾಗಿ ಅರ್ಜಿ

ಇಂಡಿಯನ್ ಪೋಸ್ಟಲ್ ಆರ್ಡರ್ ಸಂಖ್ಯೆ :

ದಿನಾಂಕ :

ರೂಪಾಯಿ :

ಪೋಟೋ

1) ಅಭ್ಯರ್ಥಿಯ ಹೆಸರು :

2) ತಂದೆ, ತಾಯಿ/ಪೋಷಕರ ಹೆಸರು :

3) ಹುಟ್ಟಿದ ದಿನಾಂಕ :

4) ಪರಿಶಿಷ್ಠ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದವರೇ, :
ಹೌದಾದರೆ ಪ್ರಮಾಣ ಪತ್ರ ಲಗತ್ತಿಸುವುದು.

5) ಪತ್ರ ವ್ಯವಹಾರ ವಿಳಾಸ ಹಾಗೂ :
ಮೊಬೈಲ್ ಸಂಖ್ಯೆ

6) ಅಪ್ರೆಂಟಿಸ್‌ಶಿಪ ಪೋರ್ಟಲ್ಲಿನ ನೊಂದಣಿ ಸಂಖ್ಯೆ :
(apprenticeshipindia.gov.in)

7) ವಿದ್ಯಾರ್ಹತೆ: (ಐ.ಟಿ.ಐ. ನಲ್ಲಿ ಗಳಿಸಿದ) :

ಗರಿಷ್ಟ ಅಂಕಗಳು :

ಪಡೆದ ಅಂಕಗಳು :

ಶೇಕಡಾವಾರು ಅಂಕಗಳು :

8) ಧೃಡೀಕರಿಸಲ್ಪಟ್ಟ ಜಾತಿ ಪ್ರಮಾಣ ಪತ್ರದ ಛಾಯಾ :
ಪ್ರತಿಯನ್ನು (ಝೆರಾಕ್ಸ) ಲಗತ್ತಿಸಲಾಗಿದೆಯೇ?

9) ಧೃಡೀಕರಿಸಲ್ಪಟ್ಟ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ಛಾಯಾ ಪ್ರತಿಯನ್ನು(ಝುರಾಕ್ಸ) ಲಗತ್ತಿಸಲಾಗಿದೆಯೇ? :

10) ಧೃಡೀಕರಿಸಲ್ಪಟ್ಟ ಇಲೆಕ್ಟ್ರೀಶಿಯನ್ ವೃತ್ತಿಯಲ್ಲಿ ಎರಡು ವರ್ಷದ ಕೋರ್ಸಿನ ಐ.ಟಿ.ಐ ಅಂಕಪಟ್ಟಿಯ ಛಾಯಾ ಪ್ರತಿಯನ್ನು (ಝುರಾಕ್ಸ) ಲಗತ್ತಿಸಲಾಗಿದೆಯೇ? :

11) ಆರು ತಿಂಗಳೊಳಗೆ ಧೃಡೀಕರಿಸಲ್ಪಟ್ಟ ಸರಕಾರಿ ಆಸ್ಪತ್ರೆಯ ವೈದ್ಯರಿಂದ ದೈಹಿಕ ಸಾಮರ್ಥ್ಯದ ಪ್ರಮಾಣ ಪತ್ರದ ಛಾಯಾ ಪ್ರತಿಯನ್ನು (ಝುರಾಕ್ಸ) ಲಗತ್ತಿಸಲಾಗಿದೆಯೇ? :

10) ಸ್ವ ವಿಳಾಸ ವಿರುವ 4"X9" ಅಳತೆಯ 1 ಲಕೋಟೆಯನ್ನು ಅರ್ಜಿಯ ಜೊತೆಗೆ ಲಗತ್ತಿಸಲಾಗಿದೆಯೇ? :

ಈ ಮೇಲೆ ತಿಳಿಸಿದ ವಿವರಗಳು ಸತ್ಯವಿದೆ ಎಂದು ಪ್ರಮಾಣ ಮಾಡುತ್ತೇನೆ. ಒಂದು ವೇಳೆ ಅಸತ್ಯವೆಂದು ಕಂಡು ಬಂದಲ್ಲಿ ನನ್ನ ಮೇಲೆ ಕಾನೂನು ಕ್ರಮ ಜರುಗಿಸಬಹುದೆಂದು ಒಪ್ಪುತ್ತೇನೆ.

ಸ್ಥಳ:

ಅರ್ಜಿದಾರರ ಸಹಿ,

ದಿನಾಂಕ: